ಎಂದಾಗಿತ್ತು. ಅದರಂತೆ ಇಬ್ಬರೂ ಕೂಡಿ ಬೇವು ಮತ್ತು ಹೊಂಗೆ ಬೀಜಗಳನ್ನು ಸಂಗ್ರಹಿಸಿದೆವು. ಪ್ರತಿದಿನ ಸಂಜೆ ನಾಲ್ಕರ ಅನಂತರ ಅವರ ಲೂನಾದಲ್ಲಿ ಡಬ್ಬಲ್ ರೈಡಿಂಗ್ ಮಾಡಿಕೊಂಡು ನಾವಿಬ್ಬರೂ ಕುಕ್ಕರಹಳ್ಳಿ ಕೆರೆ ತಲುಪುತ್ತಿದ್ದೆವು. ಅಕ್ಕಿ ಅವರು ಪಕ್ಷಿ ವೀಕ್ಷಣೆಯಲ್ಲಿ ತೊಡಗಿಕೊಂಡರೆ, ನಾನು ಮೊದಲೇ ನಿರ್ಧರಿಸಿದಂತೆ ಕೆರೆಯ ಉತ್ತರ ಭಾಗದಲ್ಲಿ ಗುಂಡಿಗಳನ್ನು ತೋಡಿ ಬೀಜಗಳನ್ನು ಬಿತ್ತಿ, ನಿಗದಿತವಾಗಿ ನೀರುಣಿಸುತ್ತಿದ್ದೆ. ಕೆಲವಾರು ದಿನಗಳಲ್ಲಿ ಬೀಜಗಳು ಮೊಳಕೆಯೊಡೆದವು. ಆ ಪೈಕಿ ಎರಡು ಹೊಂಗೆ ಗಿಡಗಳು ಬಲು ಮೋಪಾಗಿಯೇ ಬೆಳೆದವು. ಬೇವಿನ ಗಿಡಗಳು ಅಷ್ಟೊಂದು ಚೆನ್ನಾಗಿ ಬಂದಿರಲಿಲ್ಲ. ಆದರೂ ಅವುಗಳ ಆರೈಕೆ ಮುಂದುವರಿದಿತ್ತು. ಅದಾದ ಮೂರ್ನಾಲ್ಕು ವರ್ಷಗಳಲ್ಲಿ ಕೆರೆಯ ಒಳಗಡೆ ತಿರುಗಾಡುವವರಿಗಾಗಿ ರಸ್ತೆ ನಿರ್ಮಿಸಲೆಂದು ಕೆರೆ ವ್ಯವಸ್ಥಾಪಕ ವರ್ಗದವರು ಅಡ್ಡ ಬಂದ ಗಿಡಮರಗಳನ್ನು ಸವರಿಹಾಕಿದರು. ಅವುಗಳಲ್ಲಿ ಆ ಎರಡು ಹೊಂಗೆಗಿಡಗಳೂ ಕೆಲವು ಬೇವಿನ ಸಸಿಗಳೂ ಸೇರಿಹೋಗಿದ್ದವು. ಮನಸ್ಸಿಗೆ ತೀರ ಬೇಸರವಾಯಿತು. ಆಮೇಲೆ ಆ ಕಡೆ ಹೋಗಲು ಮನಸ್ಸಾಗಲಿಲ್ಲ. ಇಲ್ಲಿಯವರೆಗೂ ಹೋಗಿಲ್ಲ. ಈ ನಡುವೆ ಅಕ್ಕಿ ಅವರ ಕೌಟುಂಬಿಕ ಸಮಸ್ಯೆ ಬಿಗಡಾಯಿಸಿತು. ಬೇರೆಬೇರೆಯಾದರು. ಅವರು ಒಂಟಿಯಾದರು. ಅವರಿಗೆ ಮೊದಲಿನ ಮಾನಸಿಕ ಸ್ಥಿತಿ ಉಳಿದಿರಲಿಲ್ಲ. ಕೆಲವೊಂದು ಕಾರಣಗಳಿಂದಾಗಿ ನನ್ನೊಂದಿಗೂ ಭಿನ್ನಾಭಿಪ್ರಾಯ ತಳೆದರು. ಈ ಎಲ್ಲ ಕಾರಣಗಳಿಂದ ನಾವಿಬ್ಬರೂ ಒಟ್ಟಾಗಿ ಕುಕ್ಕರಹಳ್ಳಿ ಕೆರೆಗೆ ಹೋಗುವುದು ನಿಂತಿತು. ಮುಂದೊಂದು ದಿನ ಅವರು ತೀರ್ಥಹಳ್ಳಿ ಕಡೆ ಹೋದರೆಂದು ತಿಳಿದು ಬಂತು. ಈಗ ಅವರಿಲ್ಲ. ಕೆಲವು ದಿನಗಳ ವಿಷಣ್ಣ ಭಾವದಿಂದ ಕೂಡಿದ್ದ ಮನಸ್ಸು ಕೊಂಚ ಹಗುರವಾದ ಮೇಲೆ ನಾನು ಎಂದಿನಂತೆಯೇ ಕೆರೆಯತ್ತ ಹೋಗತೊಡಗಿದೆ. ಕೆಲವು ವರ್ಷಗಳ ಹಿಂದೆ, ಒಂದು ಸಂಜೆ ಕುಕ್ಕರಹಳ್ಳಿ ಕೆರೆಯ ಕಲ್ಲುಬೆಂಚಿನ ಮೇಲೆ ಒಬ್ಬನೇ ಕುಳಿತಿದ್ದಾಗ, ಪ್ರೌಢಶಾಲೆಯ ಸಹಪಾಠಿ, ನನ್ನ ಪ್ರಾಚೀನ ಗೆಳೆಯ ವಾಕ್ಪಟು ಗುರುಮೂರ್ತಿ ಅದೇ ಮಾರ್ಗವಾಗಿ ಬಂದ. ಮೈಸೂರಿನ ಹೈಸ್ಕೂಲೊಂದರಲ್ಲಿ ಮುಖ್ಯೋಪಾಧ್ಯಾಯನಾಗಿದ್ದ. ನಾನು, 'ಏನಪ್ಪಾ ಗುರುಮೂರ್ತಿ ಅಲ್ಲೇ ಇದ್ದೀಯ?' ಅಂತ ಕೇಳಿದೆ. ಅವನು 'ಇಲ್ಲಪ್ಪಾ, ರಿಟೈರ್ಡ್ ಆಯ್ತು' ಅಂದ. 'ಈಗೇನು ಮಾಡ್ತಿದ್ದೀಯ?' ಅಂತ ಕೇಳಿದೆ. 'ರಿಟೈರ್ಡ್ ಆದ್ಮೇಲೆ ಬೇರೆ ಏನು ಮಾಡ್ತಿಲ್ಲ, ಪೂರ್ತಿ ಅಧ್ಯಾತ್ಮ ಜೀವನ. ಈ ಲೋಕದ ಸಹವಾಸನೇ ಇಲ್ಲ' ಅಂದ.

ಅವನ ಮಾತು ನನಗೆ ವಿಚಿತ್ರವಾಗಿ ಕೇಳಿಸಿತು.

